ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1620(1735)
ಮಾನ್ಯ ಸದಸ್ಯರ ಹೆಸರು	ಶ್ರೀ ಶರವಣ ಟಿ.ಎ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ಸಚಿವರು	ಉನ್ನತ ಶಿಕ್ಷಣ ಸಚಿವರು
ಉತ್ತರಿಸಬೇಕಾದ ದಿನಾಂಕ	23.03.2026

	ಪ್ರಶ್ನೆ	**ಉತ್ತರ**
ಅ)	ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು ತನ್ನ ಖಾಯಂ ಭೋಧಕೇತರ ಸಿಬ್ಬಂದಿಗಳಿಗೆ ದಿನಾಂಕ: 01.07.2019ರ ನಂತರ ನೇಮಕವಾದ ನೌಕರರಿಗೆ ಖಾಯಂ ಪೂರ್ವ ಸೇವಾ ಅವಧಿಯನ್ನು ಎಷ್ಟು ವರ್ಷಗಳಿಗೆ ನಿಗದಿಪಡಿಸಿದೆ: (ದೃಢೀಕೃತ ಪ್ರತಿ ಒದಗಿಸುವುದು)	ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು ತನ್ನ ಖಾಯಂ ಬೋಧಕೇತರ ಸಿಬ್ಬಂದಿಗಳಿಗೆ ದಿನಾಂಕ: 01.07.2019ರ ನಂತರ ನೇಮಕವಾದ ನೌಕರರಿಗೆ ಖಾಯಂ ಪೂರ್ವ ಸೇವಾ ಅವಧಿಯನ್ನು 05 ವರ್ಷಗಳಿಗೆ ನಿಗದಿಪಡಿಸಿಕೊಂಡಿರುತ್ತದೆ.
ಆ)	ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ತನ್ನ ಖಾಯಂ ಬೋಧಕೇತರ ಸಿಬ್ಬಂದಿಗಳಿಗೆ ಖಾಯಂ ಪೂರ್ವ ಸೇವಾ ಅವಧಿಯನ್ನು (ಪೊಬೆಷನರಿ ಅವಧಿ Probationary Period) ನಿಗದಿಪಡಿಸುವಾಗ ಕರ್ನಾಟಕ ರಾಜ್ಯ ಸರ್ಕಾರದ ಕರ್ನಾಟಕ ಸಿವಿಲ್ ಸೇವೆಗಳ (ಪ್ರೊಬೆಷನ್) ನಿಯಮಗಳು 1977 (ಮುಖ್ಯವಾಗಿ ನಿಯಮ 03 ಮತ್ತು 04) ಮತ್ತು ಸದರಿ ನಿಯಮಗಳ ತಿದ್ದುಪಡಿಯ ರಾಜ್ಯಪತ್ರ ಸಂಖ್ಯೆ: ಡಿಪಿಎಆರ್ 307 ಎಸ್ಆರ್ಆರ್ 2018, ಬೆಂಗಳೂರು ದಿನಾಂಕ: 01.07.2019ರಲ್ಲಿ ತಿಳಿಸಿರುವ ಎಲ್ಲಾ ಅಂಶಗಳನ್ನು ಪಾಲಿಸಲಾಗಿದೆಯೇ;	ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು ಹೊರಡಿಸಿರುವ ದಿನಾಂಕ:05.04.2021ರ ಆದೇಶದ ಪ್ರತಿಯನ್ನು **ಅನುಬಂಧದಲ್ಲಿ** ಒದಗಿಸಲಾಗಿದೆ. ಕರ್ನಾಟಕ ಸಿವಿಲ್ ಸೇವೆಗಳು (ಪ್ರೊಬೆಷನ್) ನಿಯಮಗಳು) 1977ರ ನಿಯಮ (3)ರನ್ವಯ ಸರ್ಕಾರಿ ನೌಕರರ ಪ್ರೊಬೇಷನರ್ ಅವಧಿಯು 02 ವರ್ಷಗಳಿಗಿಂತ ಕಡಿಮೆ ಇರತಕ್ಕದ್ದಲ್ಲ ಎಂಬುದಾಗಿರುತ್ತದೆ. ಈ ನಿಯಮಗಳ 4ರಲ್ಲಿ ಪ್ರೊಬೇಷನ್ ಅವಧಿಯನ್ನು ವಿಸ್ತರಿಸುವುದು ಅಥವಾ ಕಡಿತಗೊಳಿಸುವುದು :- 4(1)(ii) ಯಾವುದೇ ಇತರೆ ನೇಮಕ ಪ್ರಾಧಿಕಾರವು ನಿರ್ದಿಷ್ಟಪಡಿಸಿದ ಪ್ರೊಬೇಷನ್ ಅವಧಿಯು ಅರ್ಧಕ್ಕಿಂತ ಹೆಚ್ಚಾಗದಷ್ಟು ಅವಧಿಯವರೆಗೆ ಎಂಬುದಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 307 ಎಸ್ಆರ್ಆರ್ 2018, ದಿನಾಂಕ: 01.07.2019ರಲ್ಲಿ ಕರ್ನಾಟಕ ಸಿವಿಲ್ ಸೇವೆಗಳು (ಪ್ರೊಬೆಷನ್) ನಿಯಮಗಳು) 1977ರ ನಿಯಮ 4(1)(ii)ಕ್ಕೆ ನಿಗದಿತ ಪ್ರೊಬೇಷನ್ ಅವಧಿಯ ಅರ್ಧದಷ್ಟು ಎಂಬ ಪದಗಳ ಬದಲಿಗೆ 05 ವರ್ಷಗಳು ಎಂಬುದಾಗಿ ತಿದ್ದುಪಡಿ ಮಾಡಲಾಗಿರುತ್ತದೆ." ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಧಿಕೃತ ಜ್ಞಾಪನ ಸಂಖ್ಯೆ: ಸೀಆಸುಇ 19 ಸೇಇವಿ 2021 ದಿನಾಂಕ: 28.6.2021ರ ರಾಜ್ಯ ಸರ್ಕಾರವು ಸ್ಥಾಪಿಸಿರುವ ನಿಗಮ, ಮಂಡಳಿ, ಕಂಪನಿ, ಸ್ಥಳೀಯ ಸಂಸ್ಥೆ, ವಿಶ್ವವಿದ್ಯಾಲಯ ಇತ್ಯಾದಿ ಸ್ವಾಯತ್ತ ಸಂಸ್ಥೆಗಳು
ಇ)	ಪಾಲಿಸಿದ್ದರೆ, ದಿನಾಂಕ: 01.07.2019ರ ನಂತರ ನೇಮಕವಾಗುವ ಖಾಯಂ ಬೋಧಕೇತರ ಸಿಬ್ಬಂದಿಗಳಿಗೆ ಖಾಯಂ ಪೂರ್ವ ಸೇವಾ ಅವಧಿಯನ್ನು (ಪೊಬೆಷನರಿ ಅವಧಿ Probationary Period) 05 ವರ್ಷಗಳಿಗೆ ನಿಗದಿಪಡಿಸಲು ಕಾರಣ/ಉದ್ದೇಶಗಳೇನು;	
ಈ)	ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ ದಿನಾಂಕ: 01.07.2019ರ ನಂತರ ನೇಮಕವಾದ ಹಾಗೂ ನಂತರ ನೇಮಕವಾಗುವ ಖಾಯಂ ಬೋಧಕೇತರ ಸಿಬ್ಬಂದಿಗೆ ಖಾಯಂ ಪೂರ್ವ ಸೇವಾ ಅವಧಿಯನ್ನು 02 ವರ್ಷಕ್ಕೆ ಮರು ನಿಗದಿಪಡಿಸಲು ಸರ್ಕಾರ ಯಾವ ಕ್ರಮ ವಹಿಸಲಿದೆ?	

		ಅವುಗಳ ನೌಕರರ ನೇಮಕಾತಿ ಮತ್ತು ಸೇವಾ ಷರತ್ತುಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ನಿಯಮ/ವಿನಿಯಮಗಳನ್ನು ರಚಿಸಿಕೊಳ್ಳುವಂತೆ ತಿಳಿಸಲಾಗಿರುತ್ತದೆ. ಅದರನ್ವಯ ಸಾರ್ವಜನಿಕ ವಿಶ್ವವಿದ್ಯಾಲಯಗಳು ಪ್ರತ್ಯೇಕ ಪರಿನಿಯಮಗಳನ್ನು ರಚಿಸಿಕೊಳ್ಳಬೇಕಾಗಿರುತ್ತದೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ ದಿನಾಂಕ: 01.07.2019ರ ನಂತರ ನೇಮಕವಾದ ಹಾಗೂ ನಂತರ ನೇಮಕವಾಗುವ ಖಾಯಂ ಬೋಧಕೇತರ ಸಿಬ್ಬಂದಿಗೆ ಖಾಯಂ ಪೂರ್ವ ಸೇವಾ ಅವಧಿಯನ್ನು 02 ವರ್ಷಕ್ಕೆ ಮರು ನಿಗದಿಪಡಿಸುವ ಕುರಿತು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಿಂದ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ.

ಸಂಖ್ಯೆ: ಇಡಿ 10 ಯುಒವಿ 2026

(ಡಾ. ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು

ಅನುಬಂಧ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು -570 006

ಆಡಳಿತ ವಿಭಾಗ

'ಕನ್ನಡ ಕಾಯಕ ವರ್ಷಾಚರಣೆ' ೧ನೇ ನವೆಂಬರ್ ೨೦೨೦ ರಿಂದ ೩೧ನೇ ಅಕ್ಟೋಬರ್ ೨೦೨೧ ರವರೆಗೆ'

ಸ್ಥಾಯಿ ಆದೇಶ

ವಿಷಯ: ಹೊಸದಾಗಿ ನೇಮಕಗೊಳ್ಳುವ ನೌಕರರುಗಳಿಗೆ ಪರೀಕ್ಷಾರ್ಥ ಅವಧಿಯನ್ನು ಎರಡು ವರ್ಷಗಳಿಂದ ಐದು ವರ್ಷಗಳಿಗೆ ಪರಿಷ್ಕರಿಸಿ ಆದೇಶಿಸಿರುವುದನ್ನು ವಿ.ವಿ.ನಿಲಯದ ನೌಕರರುಗಳಿಗೆ ಯಥಾವತ್ತಾಗಿ ಅಳವಡಿಸಿಕೊಳ್ಳುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 57 ಎಸ್ ಆರ್ ಎಸ್ 75, ದಿನಾಂಕ:26.06.1977
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 307 ಎಸ್ ಆರ್ ಆರ್ 2018, ದಿ:01.07.2019
3. ದಿನಾಂಕ: 02.01.2020 ರಂದು ನಡೆದ 169ನೇ ವ್ಯವಸ್ಥಾಪನಾ ಮಂಡಳಿಯ ತೀರ್ಮಾನ (ವಿಷಯ ಸಂಖ್ಯೆ: 169.04)
4. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 30.01.2020.

* * * * *

ಪ್ರಸ್ತಾವನೆ:

ಭಾರತ ಸಂವಿಧಾನದ 309ನೇ ಅನುಚ್ಛೇದದ ಪರಂತುಕದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕದ ರಾಜ್ಯಪಾಲರು ಈ ಮೂಲಕ ಮುಂದಿನ ನಿಯಮಗಳನ್ನು ರಚಿಸಿರುತ್ತಾರೆ. ನಿಯಮ (4) ರ ಉಪಕಂಡಿಕೆ (2) ರಂತೆ ಉಲ್ಲೇಖ(1) ರ ಆದೇಶದನ್ವಯ ಹೊಸದಾಗಿ ಸೇವೆಗೆ ಸೇರುವ ಸರ್ಕಾರಿ ನೌಕರರುಗಳು, ಎರಡು ವರ್ಷಗಳ ಪರೀಕ್ಷಾರ್ಥ ಅವಧಿಯನ್ನು ಪೂರೈಸಬೇಕೆಂದಿರುತ್ತದೆ.

ಉಲ್ಲೇಖ (2) ರ ಅಧಿಸೂಚನೆಯಲ್ಲಿ, ದಿನಾಂಕ:01.07.2019 ರಂದು ಮತ್ತು ನಂತರ ಸೇವೆಗೆ ಸೇರಿದ ಸರ್ಕಾರಿ ನೌಕರರುಗಳಿಗೆ ಎರಡು ವರ್ಷಗಳ ಪರೀಕ್ಷಾರ್ಥ ಅವಧಿಯನ್ನು ಐದು ವರ್ಷಗಳಿಗೆ ಹೆಚ್ಚಿಸಿದ್ದು, ವಿ.ವಿ.ನಿಲಯದ ನೌಕರರುಗಳಿಗೆ ಸದರಿ ಆದೇಶವನ್ನು ದಿನಾಂಕ:01.07.2019 ರಿಂದ ಜಾರಿಗೆ ಬಂದಂತೆ ಯಥಾವತ್ತಾಗಿ ಅಳವಡಿಸಿಕೊಳ್ಳುವ ಸಂಬಂಧ 169 ನೇ ವ್ಯವಸ್ಥಾಪನಾ ಮಂಡಳಿಯ ಸಭೆಗೆ ವಿಷಯವನ್ನು ಮಂಡಿಸಲಾಗಿ, ಸದರಿ ಆದೇಶವನ್ನು ಯಥಾವತ್ತಾಗಿ ಅಳವಡಿಸಿಕೊಂಡು ವಿ.ವಿ.ನಿಲಯದ ನೌಕರರುಗಳಿಗೆ ಜಾರಿಗೊಳಿಸುವಂತೆ ತೀರ್ಮಾನಿಸಿರುತ್ತದೆ.

ಸದರಿ ತೀರ್ಮಾನವನ್ನು ಅನುಷ್ಠಾನಗೊಳಿಸಲು ಮಾನ್ಯ ಕುಲಪತಿಗಳು ಅನುಮೋದನೆ ನೀಡಿರುವ ಹಿನ್ನಲೆಯಲ್ಲಿ ಈ ಆದೇಶವನ್ನು ಹೊರಡಿಸಲಾಗಿದೆ.

ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-2/9869/2021-22, ದಿನಾಂಕ:05.04.2021

ಮೇಲಿನ ಪ್ರಸ್ತಾವನೆಗೊಳ್ಪಟ್ಟು, ಮಾನ್ಯ ವ್ಯವಸ್ಥಾಪನಾ ಮಂಡಳಿಯ ತೀರ್ಮಾನ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ಹೊಸದಾಗಿ ಸೇವೆಗೆ ಸೇರುವ ಸರ್ಕಾರಿ ನೌಕರರಿಗೆ ಎರಡು ವರ್ಷಗಳ ಪರೀಕ್ಷಾರ್ಥ ಅವಧಿಯನ್ನು ಐದು ವರ್ಷಗಳಿಗೆ ಹೆಚ್ಚಿಸಿ ದಿನಾಂಕ:01.07.2019 ರಿಂದ ಜಾರಿಗೆ ಬಂದಂತೆ ಆದೇಶಿಸಿರುವುದನ್ನು ಯಥಾವತ್ತಾಗಿ ವಿ.ವಿ. ನಿಲಯದಲ್ಲಿ ಜಾರಿಗೊಳಿಸಿ ಆದೇಶಿಸಿದೆ.

ಆದೇಶದ ಮೇರೆಗೆ,

ಕುಲಸಚಿವ

ಗೆ,

ಬೋಧಕೇತರ ನೌಕರರು, ಕರಾಮುವಿ, ಮೈಸೂರು- ಮಾಹಿತಿಗಾಗಿ.

ಪ್ರತಿ.

1. ಎಲ್ಲಾ ಶಾಸನಬದ್ಧ ಅಧಿಕಾರಿಗಳು, ಕರಾಮುವಿ, ಮೈಸೂರು.
2. ಡೀನ್(ಅ.ಕ್ಷೇ), ಕರಾಮುವಿ, ಮೈಸೂರು.
3. ವಿಶೇಷ ಕರ್ತವ್ಯಾಧಿಕಾರಿಗಳು, ಮಾನ್ಯ ಕುಲಪತಿಗಳ ಆಪ್ತ ಕಾರ್ಯಾಲಯ, ಕರಾಮುವಿ, ಮೈಸೂರು.
4. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮೈಸೂರು.